ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1290
ಮಾನ್ಯ ಸದಸ್ಯರ ಹೆಸರು : ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ
ಉತ್ತರಿಸಬೇಕಾದ ದಿನಾಂಕ : 15.03.2021
ಉತ್ತರಿಸಬೇಕಾದ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು.

ಕ್ರ. ಸಂ	ಪ್ರಶ್ನೆಗಳು	ಉತ್ತರ
ಅ)	ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನಲ್ಲಿ ಕೆಲವು ನಕಲಿ ವೈದ್ಯರು ವೈದ್ಯರೆಂದು ಹೇಳಿಕೊಂಡು ರೋಗ ನಿವಾರಣೆ ಮಾಡುವುದಾಗಿ ಜನರಿಗೆ ಮೋಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ,
ಆ)	ಇಂತಹ ನಕಲಿ ವೈದ್ಯರಿಂದ ಮೋಸಹೋದ ಕುರಿತು ದೂರುಗಳು ದಾಖಲಾಗಿವೆಯೇ; (ಜಿಲ್ಲಾವಾರು ಮಾಹಿತಿ ನೀಡುವುದು)	ಬೆಂಗಳೂರು ನಗರ, ದಾವಣಗೆರೆ, ವಿಜಯಪುರ, ಚಿತ್ರದುರ್ಗ, ಗದಗ, ಚಿಕ್ಕಮಗಳೂರು, ಹಾವೇರಿ, ತುಮಕೂರು, ರಾಯಚೂರು, ಕೊಪ್ಪಳ, ಯಾದಗಿರಿ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ನಕಲಿ ವೈದ್ಯರಿಂದ ಮೋಸ ಹೋದ ಕುರಿತು ದೂರುಗಳು ದಾಖಲಾಗಿವೆ.
ಇ)	ನಕಲಿ ವೈದ್ಯರನ್ನು ಪತ್ತೆ ಹಚ್ಚಲು ಕೈಗೊಳ್ಳಲಾದ ಕ್ರಮಗಳೇನು;	ನಕಲಿ ವೈದ್ಯರುಗಳನ್ನು ಪತ್ತೆ ಹಚ್ಚಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು/ತಾಲ್ಲೂಕು ಆರೋಗ್ಯ ಅಧಿಕಾರಿಗಳು ಕೆ.ಪಿ.ಎಂ.ಇ. ಕಾಯ್ದೆಯಡಿ ಕ್ರಮ ಕೊಗೊಳ್ಳುತ್ತಿದ್ದಾರೆ.
ಈ)	ಪತ್ತೆ ಹಚ್ಚಿರುವ ವೈದ್ಯರ ಸಂಖ್ಯೆ ಎಷ್ಟು; ಹಾಗೂ ಇವರಿಗೆ ಯಾವ ಶಿಕ್ಷೆ ನೀಡಲಾಗಿದೆ?	ರಾಜ್ಯದಲ್ಲಿ ಇದುವರೆವಿಗೂ ಪತ್ತೆ ಹಚ್ಚಿರುವ ನಕಲಿ ವೈದ್ಯರ ಸಂಖ್ಯೆ 1669. ಈ ನಕಲಿ ವೈದ್ಯರ ಮೇಲೆ FIR ದಾಖಲಿಸಲಾಗಿದೆ. ಸದರಿ ನಕಲಿ ವೈದ್ಯರು ನಡೆಸುತ್ತಿದ್ದ ದವಾಖಾನೆಗಳನ್ನು ಕೆ.ಪಿ.ಎಂ.ಇ. ಅಧಿನಿಯಮದ ಅಡಿಯಲ್ಲಿ ಮುಚ್ಚಿಸಲಾಗಿದೆ.

ಸಂಖ್ಯೆ: ಆಕುಕ 18 ಎಸ್.ಟಿ.ಕ್ಯೂ 2021

(ಡಾ|| ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು